[Mr. Speaker in the Chair.]

NON-OFFICIAL RESOLUTION *re*: DIVIDING THE PRESENT STATE OF MYSORE FOR ADMINISTRATIVE REASONS.

(Debate continued).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಈಗಿರತಕ್ಕಂಥ ಮೈಸೂರನ್ನು ಎರಡು ಭಾಗಗಳಾಗಿ ಮಾಡಬೇಕು, ಎರಡು ರಾಜ್ಯಗಳಾಗಿ ಮಾಡಬೇಕು—ಹೀಗೆ ಎರಡು ರಾಜ್ಯಗಳಾಗಿ ಮಾಡುವುದರಿಂದ ಉತ್ತಮವಾದಂಥ ಆಡಳಿತ ದೊರೆಯುತ್ತದೆ, ಹಾಗೆ ಉತ್ತಮವಾದಂಥ ಆಡಳಿತ ದೊರೆತರೆ ಜನತೆಗೆ ಒಳ್ಳೆಯದಾಗುತ್ತದೆ ಮತ್ತು ರಾಜ್ಯಾಭಿವೃದ್ಧಿಯಾಗುತ್ತದೆಂದು ಹೇಳಿ 19 6ನೇ ನವಂಬರ್ ಒಂದನೇ ತಾರೀಖಿನಿಂದಾಚೆಗೆ ಯಾವ ಪಕ್ಷ ಅಧಿಕಾರದಲ್ಲಿತ್ತೋ ಅದರಲ್ಲಿದ್ದಂತಹ ಸೇಕಡ 50 ರಷ್ಟು ಸದಸ್ಯರು ಹೇಳಿದ್ದರು. ಆಗ ಅಧಿಕಾರದಾಹದಿಂದ ಮೈಸೂರು ಸಂಸ್ಥಾನದಲ್ಲಿ ಮೂರು ಜನ ಮುಖಂಡರುಗಳು ಈ ರಾಜ್ಯ ವಿಸ್ತಾರವಾಗುವುದರಿಂದ ಮತ್ತು ಈ ರಾಜ್ಯ ದೊಡ್ಡ ದಾಗುವುದರಿಂದ ನಮಗೆ ನಮುದ್ರದ ಸಹಾಯ ಸಿಗುತ್ತದೆ, ಹಡಗುಗಳು ಬಂದು ನಿಲ್ಲತಕ್ಕ ಜಾಗ ಸಿಗುತ್ತದೆ, ರೇವುಪಟ್ಟಣಗಳು ಸಿಗುತ್ತವೆ, ದೊಡ್ಡ ದೊಡ್ಡ ಕಾಡುಗಳು ಸಿಗುತ್ತವೆ. ಅಲ್ಲದೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆಮಾಡಲು ಸಾಧ್ಯವಾಗುತ್ತದೆಂದು ಹೇಳಿದರು. ಅದಕ್ಕೋಸ್ಕರ ಈ ರಾಜ್ಯ ವಿಶಾಲವಾಗಬೇಕು, ಕನ್ನಡ ಜನರೆಲ್ಲ ಒಂದಾಗಬೇಕು, ಕನ್ನಡನಾಡು ಒಂದಾಗಬೇಕು, ಮೈಸೂರು ಚಾಮುಂಡಿಯನೆಲವೀಡು ಕರ್ಣಾಟಕ ಸಿಂಹಾಸನಾಧೀಶ್ವರರು ಆಳಿದಂತಹ ರಾಜ್ಯವೆಂಬುದಾಗಿ ನನ್ನ ಸ್ನೇಹಿತರಾದ ಹರಿಹರದ ಆ ಕಡೆ ಇದ್ದಂಥ ಶ್ರೀ ದೊಡ್ಡಮೇಟಿಯವರು ಉದ್ಗಾರವಾಡಿದರು. ಆದರೆ ಆ ಉದ್ಗಾರದ ಹಿನ್ನೆಲೆ ಏನೆಂಬುದನ್ನು ತಾವು ಯೋಚನೆ ಮಾಡಬೇಕು.

[Mr. Deputy Speaker in the Chair]

ನನ್ನ ಸ್ನೇಹಿತರು ಈ ರಾಜ್ಯ ವಿಸ್ತಾರವಾಗಬೇಕು ಎಂಬುದಾಗಿ ಅಭಿಪ್ರಾಯಪಟ್ಟು ಆಗ ಏನು ಈ ರಾಜ್ಯವನ್ನು ದೊಡ್ಡದಾಗಿ ಮಾಡಿದರೋ ಅವರೇ ಅದನ್ನು ಲಿಕ್ವಿಡೇಟ್ ಮಾಡುತ್ತಿದ್ದಾರೆ. ಈ ರಾಜ್ಯವನ್ನೇ ಮಹಾರಾಷ್ಟ್ರಕ್ಕೆ ಮಾರಾಟ ಮಾಡುತ್ತಿದ್ದಾರೆ. ಈ ರಾಜ್ಯ ಏತಕ್ಕೆ ವಿಶಾಲವಾಗಿರಬೇಕು, ಈ ರಾಜ್ಯಕ್ಕೆ ಮತ್ತಷ್ಟು ಬೇರೆ ಭಾಗಗಳು ಏತಕ್ಕೆ ಸೇರಬೇಕು ಎಂದು ಶ್ರೀಮಾನ್ ದೊಡ್ಡಮೇಟಿಯವರಿಗೆ ಹಾಗೂ ಅಧಿಕಾರದಲ್ಲಿರತಕ್ಕ ಪಕ್ಷಕ್ಕೆ ಮತ್ತು ಹೊರಗಡೆ ಇದ್ದಂಥ ಒಂದೇ ಮಾತನ್ನಾಡುವ ಜನರಿಗೆ ಒಂದು ಸಪಾಲನ್ನು ಹಾಕುತ್ತೇನೆ. ಈಗಾಗಲೇ ಬೆಳಗಾವಿನ್ನು ಸೇರಿಸಿಕೊಂಡಿರಿ. ಕಾರವಾರವನ್ನೂ ಹೊಸದಾಗಿ ಸೇರಿಸಿ ಸೌತ್‌ಕೆನರವನ್ನು ಮತ್ತು ಕೊಳ್ಳೇಗಾಲವನ್ನೂ ಸಹ ತೆಗೆದುಕೊಂಡಿರಿ. ಈ ರಾಜ್ಯವನ್ನು ಹೊಸದಾಗಿ ರಚನೆಮಾಡಿದಾಗ ಕಾನರಗೋಡನ್ನು ಬಿಟ್ಟು ಬಂದಿದ್ದೀರಿ. ತಾಳವಾಡಿ ಫಿರ್ಕಾ ಮತ್ತು ಮುಡಕಶಿರಾವನ್ನೂ ಸಹ ಬಿಟ್ಟು ಬಂದಿದ್ದೀರಿ. ಇದಕ್ಕೆ ಏನು ಕಾರಣ ಎಂದರೆ, ಅಲ್ಲಿಂದ ಯಾವ ಸದಸ್ಯರು ಇಲ್ಲಿಗೆ ಬರುತ್ತಾರೆಂಬುದು. ಒಕ್ಕಲಿಗರು ಬರುತ್ತಾರೋ, ಬ್ರಾಹ್ಮಣರು ಬರುತ್ತಾರೋ, ಹರಿಜನರು ಬರುತ್ತಾರೋ, ಯಾರು ಬಂದರೆ ಕುಮ್ಮಕ್ಕು ಸಿಗುತ್ತದೆ, ಎಂಬುದನ್ನೆಲ್ಲ ಯೋಚಿಸಿ ತಮ್ಮ ಗುಂಪನ್ನು ಬೆಳೆಸುವುದಕ್ಕೆ ಹಾಗೂ ಒಂದೇ ಜಾತಿಯನ್ನು ಬೆಳೆಸುವುದಕ್ಕೆ ಅನುಕೂಲವಾಗುವಂತೆ ಅಷ್ಟು ಜಾಗವನ್ನು ತೆಗೆದುಕೊಂಡು ಬಂದಿದ್ದೀರಿ. ಕಾನರಗೋಡಿನಿಂದ ಒಬ್ಬ ಬ್ರಾಹ್ಮಣ ಬರುತ್ತಾನೋ; ಮುಡಕಶಿರಾ ಬಂದರೆ ಒಕ್ಕಲಿಗರು ಬರುತ್ತಾರೋ ಏನೋ; ಅದಕ್ಕೋಸ್ಕರ ಶ್ರೀ ಮಾನ್ ಸಂಜೀವರೆಡ್ಡಿಯವರು ವಿರೋಧವಾಗಿದ್ದಾರೆಂದು ತೋರಿಸುತ್ತಿದ್ದಾರೆ. ಇನ್ನು ಕಾರವಾರದಿಂದ ಯಾರು ಬರುತ್ತಾರೋ, ಒಕ್ಕಲಿಗರು ಏನಾದರೂ ಬರುತ್ತಾರೋ ಗೊತ್ತಿಲ್ಲ. ರಾಜ್ಯ ದೊಡ್ಡದಾಗಬೇಕು, ರಾಜ್ಯ ವಿಸ್ತಾರವಾಗಬೇಕು, ಕನ್ನಡನಾಡು ಒಂದಾಗಬೇಕು ಮೈಸೂರಿಗೆ ಕರ್ಣಾಟಕವೆಂದು ಹೆಸರು ಇಡಬೇಕೆಂದು ಶ್ರೀಮಾನ್ ದೊಡ್ಡಮೇಟಿಯವರು ಹೇಳುವುದನ್ನು ಕೇಳಿ ಕೇಳಿ ನನಗೆ ಸಾಕಾಗಿ ಹೋಗಿದೆ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಒಂದು ಮಾತನ್ನು ಹೇಳಿದರು. ಒಂದು ಅಂಗುಲದಷ್ಟು ನಮ್ಮ ಭೂಮಿಯನ್ನು ಅವರಿಗೆ ಬಿಟ್ಟುಕೊಡುವುದಿಲ್ಲ ಎಂದು. ಆದರೆ ನನಗೆ ಬಂದಿರುವ ವರ್ತಮಾನದಂತೆ ಬೆಳಗಾಂ, ಕಾರವಾರ ಮತ್ತು ನಿಪ್ಪಾಣಿಗಳನ್ನು ಬಿಟ್ಟು ಕೊಡುವುದಕ್ಕೆ ಮೈಸೂರು ಮುಖ್ಯಮಂತ್ರಿಗಳು ಒಪ್ಪಿಕೊಂಡು ಬಂದಿದ್ದಾರೆಂದು ಗೊತ್ತಾಗಿದೆ.

ಆದ್ದರಿಂದ ಶ್ರೀಮಾನ್ ದೊಡ್ಡಮೇಟಿಯವರು ಕಾಣುವಂತಹ ಕರ್ನಾಟಕ ರಾಜ್ಯ ಬರೀ ಕನಸಾಗಿದೆಯೇ ಹೊರತು ನನಸಾಗುತ್ತದಿಲ್ಲ. ಎಷ್ಟೋಷ್ಟೋ ಸಣ್ಣಪುಟ್ಟ ರಾಜ್ಯಗಳಿವೆ. ಜಪಾನ್ ದೇಶ ನಮಗಿಂತ ಚಿಕ್ಕದು ಎಂದು ಹೇಳುತ್ತೇನೆ. ಅಮೇರಿಕಾದೇಶದಲ್ಲಿ ನಮಗಿಂತಲೂ ಜನ ಕಡಿಮೆ ಇದ್ದರೂ ಅಲ್ಲಿ 50 ರಾಜ್ಯಗಳಿವೆ.

1970ನೇ ಇಸವಿಯ ಹೊತ್ತಿಗೆ ನಮ್ಮ ದೇಶದ ಜನಸಂಖ್ಯೆ ಇನ್ನೂ ಜಾಸ್ತಿಯಾಗುತ್ತದೆ. ಮತ್ತು ನಮ್ಮ ದೇಶ ಇನ್ನೂ ವಿಶಾಲವಾಗುತ್ತದೆ. ಅದಕ್ಕೋಸ್ಕರವಾಗಿ ಆಡಳಿತಕ್ಕೆ ಅನುಕೂಲವಾಗುವಂತೆ ಈ ರಾಜ್ಯವನ್ನು ಎರಡು ರಾಜ್ಯಗಳನ್ನಾಗಿ ಮಾಡಿ ರಾಜ್ಯದಲ್ಲಿ ಸಂಪತ್ತನ್ನು ಅಭಿವೃದ್ಧಿ ಮಾಡಿದರೆ ಈ ರಾಜ್ಯದಲ್ಲಿ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಅನೇಕ ಜನ ಹೇಳಿದ್ದಾರೆ. ಈ ರಾಜ್ಯದಲ್ಲಿ 5—6 ವರ್ಷಗಳಿಂದ ಅವ್ಯವಹಾರ, ಅನಾಹುತ, ಅತ್ಯಾಚಾರ ಇತ್ಯಾದಿ ಕೃತ್ಯಗಳು ನಡೆದುಹೋಗಿವೆ. ವಿದ್ಯಾಮಂತ್ರಿಗಳು ಮಾಡಿರತಕ್ಕ ಕೆಲಸವನ್ನೇ ನೋಡಿದರೆ ತಮಗೆ ಗೊತ್ತಾಗತ್ತದೆ. ಬಿಜಾಪುರ ಹಿಂದುಳಿದಿದೆ, ಧಾರವಾಡ ಹಿಂದುಳಿದಿದೆ, ಅಲ್ಲಿ ಕೆರೆಗಳಿಲ್ಲ, ಕಟ್ಟೆಗಳಿಲ್ಲ, ಶಾಲೆಗಳಿಲ್ಲ, ಹೈಸ್ಕೂಲುಗಳಿಲ್ಲ, ಕಾಲೇಜುಗಳಿಲ್ಲ ಎಂದು ಹೇಳಿ 1956ನೇ ಇಸವಿ ನವಂಬರ್ ತಿಂಗಳು ಒಂದನೇ ತಾರೀಖಿನಿಂದೀಚೆಗೆ ಇಪ್ಪತ್ತಿನವರೆಗೂ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ, ಅಲ್ಲಿ ಏನೇನು ಡೆವಲಪ್‌ಮೆಂಟ್ ಮಾಡಿದ್ದಾರೆ ಎಂದು ಸ್ವಲ್ಪ ನೋಡಿದರೆ ಹಳೆಯ ಮೈಸೂರಿನವರು ಮೈಸೂರು ಸರ್ಕಾರದ ಆಡಳಿತದಲ್ಲಿರುವುದಕ್ಕಿಂತಲೂ ಬೇರೆ ಯಾವುದಾದರೂ ರಾಜ್ಯಕ್ಕೆ ವರ್ಗಾವಣೆ ಮಾಡಿದರೆ ನಾವು ಹೋಗುವುದಕ್ಕೆ ತಯಾರಾಗಿದ್ದೇವೆ ಎಂಬ ಭಾವನೆ ಬಂದಿದೆ. ಇವೊತ್ತಿನ ದಿವಸ ಹಳೆಯ ಮೈಸೂರಿನಲ್ಲಿ ಸ್ಥಾಪನೆ ಮಾಡಿರುವ ಶಾಲಾ ಕಾಲೇಜುಗಳೆಷ್ಟು, ಬೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕಗಳಲ್ಲಿ ಹಿಂದೆ ಇದ್ದಂತಹ ಶಾಲಾ ಕಾಲೇಜುಗಳೆಷ್ಟು, 1956ನೇ ಇಸವಿಯಿಂದೀಚೆಗೆ ಹೊಸದಾಗಿ ಸ್ಥಾಪನೆ ಮಾಡಿರುವ ಶಾಲಾಕಾಲೇಜುಗಳೆಷ್ಟು, ಅಭಿವೃದ್ಧಿ ಕಾರ್ಯಗಳನ್ನು ಎಷ್ಟು ಮಾಡಿದ್ದಾರೆ ಎಂಬುದನ್ನು ಕೇಳಿದರೆ ತಮಗೆ ಗೋಚರವಾಗುತ್ತದೆ; ಅದಕ್ಕೋಸ್ಕರವಾಗಿ ಹಳೆಯ ಮೈಸೂರಿನ ಜನ ಬೇರೆ ರಾಜ್ಯ ಆಗಬೇಕು ಎಂದು ಹೇಳುತ್ತಾರೆ. ಜಾತಿಯ ಹೆಸರಿನಲ್ಲಿ ಆಡಳಿತವನ್ನು ನಡಸತಕ್ಕ ಜನಗಳಿಂದ ತೊಂದರೆಯಾಗಬಹುದು ಎಂದು ಅನಿಸುತ್ತದೆ. ನಮ್ಮ ಸ್ನೇಹಿತರನೇಕ ಜನ ಹೇಳುತ್ತಾರೆ, ಕನ್ನಡವನ್ನು ಮಾತನಾಡತಕ್ಕ ಜನಗಳಾದ ನಾವುಗಳು ಮಹಾರಾಷ್ಟ್ರದವರ ಕೈಗೆ ಸಿಕ್ಕಿ ನೊಂದಿದ್ದೇವೇ; ನಮಗೆ ಬಹಳ ಕಷ್ಟವಾಯಿತು, ಅದಕ್ಕೋಸ್ಕರವಾಗಿ ನಾವು ಅಲ್ಲಿಂದ ಮೈಸೂರಿಗೆ ಬಂದಿದ್ದೇವೆ, ಎಂದು. ಮೈಸೂರು ತವ್ಮದೇ ಒಂದು ರಾಜ್ಯ ಎಂದು ಹೇಳಿ ಇಲ್ಲಿ ಒಂದೇ ಜಾತಿಯ ಮಂತ್ರಿಗಳನ್ನು ಮಾಡಿದ್ದಾರೆ. ಆದ್ದರಿಂದ ಜಾತಿಯ ರಾಜ್ಯ ನಿರ್ಮಾಣವಾಗುವಂತೆ ಮೈಸೂರು ರಾಜ್ಯ ಎರಡು ಭಾಗ ಆಗಬೇಕು. ಹಳೆಮೈಸೂರಿಗೆ ಪ್ರತ್ಯೇಕವಾದ ಆಡಳಿತ ಬೇಕು. ಯಾರು ರಾಜ್ಯ ವಿಶಾಲ ಆಗಬೇಕೆಂದು ಪ್ರಯತ್ನ ಪಟ್ಟರೊ, ಅವರಿಗೆ ನಾನು ಸವಾಲು ಹಾಕುತ್ತೇನೆ. ಈಗ ವಿದರ್ಭ ರಾಜ್ಯ ಆಗಬೇಕೆಂದು ಗಲಾಟೆ ನಡೆಯುತ್ತಿದೆ. ಪಂಜಾಬಿ ಸುಬಾ ಮತ್ತು ಹರಿಯಾನಾ ರಾಜ್ಯಗಳು ರಚನೆಯಾಗಲಿಲ್ಲವೇ? ಅದೇರೀತಿ ಮೈಸೂರು ರಾಜ್ಯವನ್ನು ಏತಕ್ಕೆ ಎರಡು ಭಾಗ ಮಾಡಬಾರದು? ಭಾಷಾವಾರು ಪ್ರಾಂತರಚನೆ ಮಾಡಿ ಒಂದು ಭಾಷೆಯನ್ನು ಮಾತನಾಡುವ ಜನ ಒಂದು ಕಡೆ ಸೇರಬೇಕೆಂದು ಮಾಡಿದರು. ಇದಕ್ಕಿಂತಲೂ ಮಹಾಪರಾಧ ಮತ್ತೊಂದಿಲ್ಲ. ರಕ್ತದ ಕಾಲುವೆ ಹರಿಯಲಿ ಈ ರಾಜ್ಯವನ್ನು ಎರಡು ತುಂಡು ಮಾಡದ ಹೊರತು ಬಿಡುವುದಿಲ್ಲ ಎಂದು ನಾನು ಹೇಳುತ್ತೇನೆ. ಬೊಂಬಾಯಿ ಕರ್ನಾಟಕದವರು ಹೇಗೆ ಒಂದು ಇಂಚು ಭೂಮಿಯನ್ನೂ ಮಹಾರಾಷ್ಟ್ರದವರಿಗೆ ಬಿಟ್ಟು ಕೊಡುವುದಿಲ್ಲ, ನಾವು ಅವರ ಕೈಗೆ ಹಿಂದೆ ಸಿಕ್ಕಿ ಹಿಂಸೆ ಪಟ್ಟಿದ್ದೇವೆಂದು ಹೇಳುತ್ತಾರೆಯೋ ಅದೇರೀತಿ ನಾವು ಒಂದು ಜಾತಿಯವರ ಕೈಯ್ಯಲ್ಲಿ ಸಿಕ್ಕಿ ಹಿಂಸೆ ಪಡುತ್ತಿದ್ದೇವೆ. ವಕ್ಕಲಿಗರು ಇರುವ ಕಡೆ ಒಂದು ನ್ಯೂಲು ಕೊಡಿ ಎಂದು ಕೇಳಿದರೆ ಕೊಡುವುದಿಲ್ಲ. ಲಿಂಗಾಯಿತರು ಇರುವ ಕಡೆ 4 ಮಕ್ಕಳು ಇದ್ದರೂ ಒಂದು ನ್ಯೂಲು ಕೊಡುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರ ಎಂದು ಕಾಂಗ್ರೆಸ್ಸಿನ ಹೆಸರಿನಲ್ಲಿ ಒಂದು ಜಾತಿಯ ಸರ್ಕಾರ ಇದೆ. ಈ ಜಾತಿಯ ಸರ್ಕಾರ ಹೋಗಬೇಕು. 10 ಮನೆ ಲಿಂಗಾಯಿತರು ಇದ್ದರೂ ಕೂಡ ಅಲ್ಲಿಗೆ ಲಿಂಗಾಯಿತ ತಹಶೀಲ್ದಾರನ್ನು ಹಾಕುತ್ತಾರೆ; ಇನ್‌ಸ್ಪೆಕ್ಟರನ್ನು ಹಾಕುತ್ತಾರೆ. ಇದು ನನಗೆ ಅನುಭವ ಇದೆ. ಈರೀತಿ ತಹಶೀಲ್ದಾರರುಗಳನ್ನು ಟ್ರಾನ್ಸ್‌ವರ್ ಮಾಡುವಾಗ ಇವನೇನು ಒಕ್ಕಲಿಗರ ಜಾತಿಯವನೇ, ಬ್ರಾಹ್ಮಣರ ಜಾತಿಯವನೇ ಅಥವಾ ಲಿಂಗಾಯಿತರ ಜಾತಿಯವನೇ ಎಂದು ನೋಡುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ನನ್ನ ಜಿಲ್ಲೆಯಲ್ಲಿಯೇ ಒಂದು ಕಡೆ ಒಬ್ಬರು ಒಕ್ಕಲಿಗರ ಜಾತಿಯ ತಹಶೀಲ್ದಾರರ ವಿರುದ್ಧ ಯಾರೋ ಏನೋ ಹೇಳಿದರೆಂದು ಮುಖ್ಯ ಮಂತ್ರಿಗಳು ಬೀದಿಯಲ್ಲೇ ನಿಂತು ಕೊಂಡು ಅವರ ವರ್ಗಾವಣೆಗೆ ಆರ್ಡರ್ ಮಾಡಿದ್ದಾರೆ. This man may be sent out.....

MR. DEPUTY SPEAKER.—This is not the place for pleading like that. He is making allegations against the Chief Minister in connection with a particular individual. He cannot plead for an individual officer.

SRI C. J. MUCKANNAPPA.—I am just bringing to your notice what has happened. What his order was, 'this man may be sent out of this place and he may be posted either to Gulbarga or Belgaum.' ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಕಾಂಗ್ರೆಸ್ ಸರ್ಕಾರ ಜಾತಿ ಕುಲವನ್ನೇ ಆಧಾರವಾಗಿ ಇಟ್ಟು ಕೊಂಡು ಕೆಲಸ ಮಾಡುತ್ತಿದೆ, ಆಡಳಿತವನ್ನು ನಡೆಸುತ್ತಿದೆ. ವಿದ್ಯಾ ಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆ ಮತ್ತು ಕೈಗಾರಿಕಾ ಇಲಾಖೆ. ಈ ಮೂರು ಇಲಾಖೆಗಳನ್ನು ತೆಗೆದುಕೊಂಡು ಲೆಕ್ಕ ಹಾಕಿದರೆ ಮಂತ್ರಿಗಳಿಂದ ಹಿಡಿದು ಕೊನೆಯ ಕೆಲಸ ಮಾಡತಕ್ಕ ಮೇಸ್ತ್ರಿಯವರೆಗೂ ಒಂದೇ ಜಾತಿಯ ಸೂಗು ಇದೆ. ಕಾಂಗ್ರೆಸ್ಸಿನ ಹೆಸರಿನಲ್ಲಿ, ಕಾಂಗ್ರೆಸ್ ಪಕ್ಷದ ಸೋಗಿನಲ್ಲಿ ಒಂದೇ ಒಂದು ಜಾತಿಯವರು ಆಡಳಿತವನ್ನು ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ನಾವು ಏತಕ್ಕೆ ಇರಬೇಕು ? ನಾವು ಈ ರಾಜ್ಯದಲ್ಲಿರುವುದರಿಂದ ಏನು ಸುಕೃತ ದೊರೆಯುತ್ತದೆ ? ನಮ್ಮನ್ನು ಆಂಧ್ರಕ್ಕೋ ಅಥವ ಬೇರೆ ಯಾವುದಾದರೂ ಒಂದು ರಾಜ್ಯಕ್ಕೋ ಬೇಕಾದರೆ ಕಳುಹಿಸಿ. ನಾವು ಹೋಗುತ್ತೇವೆ, ನಾನು ಇದನ್ನು ಹೇಳುವಾಗ ನನ್ನ ಮನಸ್ಸಿನಲ್ಲಿ ದುಃಖ ಏರುತ್ತಿದೆ. ಈ ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜು ಮತ್ತು ಮೆಡಿಕಲ್ ಕಾಲೇಜು ತೆರೆಯುವುದಕ್ಕೆ ಬರುವುದಿಲ್ಲ ಎಂದು ಒಕ್ಕಲಿಗರಿಗೆ ಪರ್ಮಿಷ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದಂತಹ ಈ ಜಾತಿಯ ಸರ್ಕಾರ ಎರಡು ಮಠಗಳು ಎರಡು ಕಾಲೇಜುಗಳನ್ನು ತೆರೆಯಲು ಓವರ್‌ನೈಟ್ ಪರ್ಮಿಷನ್ ಕೊಟ್ಟು ಅವರು ಮೈಸೂರಿನಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು ಮತ್ತು ದಾವಣಗೆರೆಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆರೆದಿದ್ದಾರೆ. ಮಹಾರಾಷ್ಟ್ರ ರಾಜ್ಯದಿಂದ ಹೊರಗಡೆ ಬಂದಿರುವವರು ಏನು ಹೇಳುತ್ತಿದ್ದಾರೋ ಅದನ್ನೇ ಹಳೆಯ ಮೈಸೂರಿನವರು ಹೇಳುತ್ತಿದ್ದಾರೆ. ಅಲ್ಲಿಂದ ಬಂದಿರುವ ಮಹಾರಾಷ್ಟ್ರೀಯರು ನಿಮ್ಮ ಹವ್ಯಾನ ಬೇಡ, ನಾವು ಮಹಾರಾಷ್ಟ್ರಕ್ಕೆ ಹೋಗುತ್ತೇವೆ ಎಂದು ಹೇಗೆ ಹೇಳುತ್ತಾರೋ ಹಾಗೆಯೇ ನಾವು ಹಳೇ ಮೈಸೂರಿನವರು, ಹೊಸ ಮೈಸೂರಿನವರ ಹವ್ಯಾನ ಬೇಡ, ನಮ್ಮನ್ನು ಬಿಟ್ಟು ಬಿಡಿ ಎಂದು ಹೇಳುತ್ತೇವೆ.

11-00 A.M.

ಈಗ 10 ವರ್ಷಗಳಿಂದ ನಾವು ಕಷ್ಟಪಟ್ಟಿದ್ದೇವೆ. ನಮ್ಮನ್ನು ಇವರು ಗಾಣಕ್ಕೆ ಹಾಕಿ ಹಿಂಡಿ ಎಣ್ಣೆಯನ್ನು ತೆಗೆದಿದ್ದಾರೆ. ಇದರ ಪರಿಣಾಮವಾಗಿ ಹೊಸ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಇತರ ಅಭಿವೃದ್ಧಿ ಕಾರ್ಯದಲ್ಲಿ ಹಳೆಯ ಮೈಸೂರು ಹಿಂದೆ ಬಿದ್ದಿದೆ. ನಿನ್ನೆ ದಿನ ಶ್ರೀಮಾನ್ ವೀರೇಂದ್ರಪಾಟೀಲ್‌ರವರು ಗುಲ್ಬರ್ಗ ಡಿವಿಷನ್‌ನಲ್ಲಿ ಎಷ್ಟರಮಟ್ಟಿಗೆ ಪಿ. ಡಬ್ಲ್ಯು. ಡಿ. ಕೆಲಸ ನಡೆದಿದೆ ಎಂದು ಒಂದು ಬ್ರೋಷರ್ ಇಶ್ಯೂಮಾಡಿದ್ದಾರೆ. ಮೊನ್ನೆ ಮಾನ್ಯ ಸ್ನೇಹಿತರು ತಾಲ್ಲೂಕು ಡೆವಲಪ್‌ಮೆಂಟಿಗೆ ಎಷ್ಟು ಹಣ ಸಿಕ್ಕಿದೆ ಎಂದು ಆಚೆ ಕಡೆ ಒಂದು ತಾಲ್ಲೂಕಿನಿಂದ ಬಂದಿರತಕ್ಕವರು ಹೇಳಿದ್ದಾರೆ. ನಾವು ಮಾಡಿದ ಪಾಪ ಏನು ಎಂದು ನನಗೆ ಅನಿಸುತ್ತದೆ ? ಅದಕ್ಕೋಸ್ಕರ ಸ್ವಾಮಿ, ಯಾರೋ ಇಬ್ಬರು ರಾಜಕೀಯ ಮುಖಂಡರು ಕಾಂಗ್ರೆಸ್ ಸೇರಿಕೊಂಡು ಕಿತ್ತಾಟ ಮಾಡಿ ರಾಜ್ಯದ ಮುಖ್ಯ ಮಂತ್ರಿಗಳು ಆಗುತ್ತೇವೆ ಎಂದು ಕನಸು ಕಂಡು, ಆ ಕನಸು ನನಸಾಗಲಲ್ಲ ಎಂದು ಈಗ ನಮ್ಮ ಜೊತೆಯಲ್ಲಿ ಕೈಗೂಡಿಸಿದ್ದಾರೆ ಮತ್ತು ಅವರು ರಾಜ್ಯ ಸನ್ಯಾಸಿಗಳಾಗುವುದು ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ನಿಮ್ಮ ಜೊತೆಗೆ ಇರುವುದಕ್ಕೆ ಶಕ್ಯ ಇಲ್ಲ, ನಿಮ್ಮ ರಾಜ್ಯ ಸಾಕು, ಅದಕ್ಕೋಸ್ಕರ ವೈಯಬಲ್ ಆಡ್ಜಿಸ್ಟಿಟ್ಮೆಂಟ್ ಯೂನಿಟ್ಸ್ ಮಾಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಹಾರಾಷ್ಟ್ರ ಮೈಸೂರು ಗಡಿ ಪ್ರಶ್ನೆ ಬಂದಾಗ ಅನೇಕ ಜನ ಮಾತನಾಡಿದ್ದಾರೆ. ಮೈಸೂರಿನ ಜನತೆಯ ಪ್ರಶ್ನೆ ಬಂದಾಗ ಮೈಸೂರಿನ ಜನಗಳ ಮಾನ, ಮರ್ಯಾದೆ ಬಂದಾಗ, ಇನ್ನೊಬ್ಬರು ನಮ್ಮ ಮೇಲೆ ಆಕ್ರಮಣ ಮಾಡುವುದು ಸರಿಯಲ್ಲ ಎಂದು ನಾವು ಅವರಿಗೆ ಹೇಗೆ ಹೇಳುತ್ತೇವೋ, ಅದೇರೀತಿ ನೀವು ಇನ್ನೊಬ್ಬರ ಮೇಲೆ ಆಕ್ರಮಣ ಮಾಡಿ ಅವರನ್ನು ಆಳುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಇಪ್ಪತ್ತು ಸುತ್ತೂರು ಮಠ, ಸಿರಿಗೆರೆ ಮಠ, ಮುರಗಿ ಮಠ ಇವೆ. ಅವರಿಗೆ ಗೌರವ ಕೊಟ್ಟು ಲಿಂಗಾಯಿತ, ಒಕ್ಕಲಿಗ, ಬ್ರಾಹ್ಮಣ ಎನ್ನುವ ದ್ವೇಷ ಮಾಡುತ್ತಾ ಇರಲಿಲ್ಲ. ನನ್ನ ಸ್ನೇಹಿತರು ಹರಿಹರ, ಬಿಜಾಪುರ ಈ ಕಡೆಯಿಂದ ಬಂದು ವಿಷದ ಬೀಜ ಹಾಕಿದರು. ಜಾತಿ ಕುಟ್ಟಬೇಕು, ಒಕ್ಕಲಿಗರಿಂದ ಅಧಿಕಾರ ಕಿತ್ತುಕೊಳ್ಳಬೇಕು, ಬ್ರಾಹ್ಮಣರನ್ನು ತುಳಿಯಬೇಕು, ಮುಸಲ್ಮಾನರನ್ನು ಓಡಿಸಬೇಕು ಎಂಬ ವಿಷಬೀಜ

ಹಾಕಿದರು. ನಾನಾದರೂ ಹೇಳುತ್ತೇನೆ, ಪ್ರೀತಿ ಸೌಹಾರ್ದ ಸ್ನೇಹದಿಂದ ಬದುಕಬೇಕು, ರಾಜ್ಯ ಅಭಿವೃದ್ಧಿ ಆಗಬೇಕು ಎಂದು ಹೇಳತಕ್ಕ ಜನಗಳಲ್ಲಿ ಇಂತಹ ವಿಷದ ಬೀಜ ಬಿತ್ತಿದ್ದೀರಿ. ನಿಮ್ಮ ಜೊತೆಯಲ್ಲಿ ಇರುವುದಕ್ಕೆ ನಾವು ತಯಾರಿಲ್ಲ. ಅದಕ್ಕೋಸ್ಕರ ರಾಜ್ಯ ಎರಡು ಆಗಬೇಕು ಎಂದು ಈ ಸಭೆಯಲ್ಲಿ ಮತ್ತು ಈ ಸಭೆಯ ಹೊರಗಡೆ ಪಾವ ಇಟ್ಟಿದ್ದೇವೆ. ಶ್ರೀಮಾನ್ ದನ್ನೂರವರು ಮಾತನಾಡುತ್ತಾ ಹೇಳಿದರು: How linguistic fanaticism has created disunity in the country and how it must be revised. ಶ್ರೀ ಸೆಟಲ್‌ವಾಡ್‌ರವರು ಈ ರಾಜ್ಯದಲ್ಲಿ ಕಾನೂನು ಕಟ್ಟಳೆ ವಿಚಾರ ಪ್ರಸ್ತಾಪಿಸುತ್ತಾ, ಬುದ್ಧಿಪಾದ ಹೇಳುತ್ತಾ ಲಿಂಗ್ವಿಸ್ಟಿಕ್ ಪ್ರಾವಿನ್ಸ್‌ಸ್ ಹೋಗಬೇಕು, ಮೈಯಬಲ್ ಅಡ್ಮಿನಿಸ್ಟ್ರೇಟೀವ್ ಯೂನಿಟ್ಸ್ ಕ್ರಿಯೇಟ್ ಮಾಡಬೇಕು ಎಂದು ಹೇಳಿದರು. ಏತಕ್ಕೋಸ್ಕರ ಕಾಶ್ಮೀರ ಸಣ್ಣ ರಾಜ್ಯ ಬೇಕು ಎಂದು ಹೇಳುತ್ತೇವೆ? ಕಾಶ್ಮೀರ ಹಿಂದೂಸ್ಥಾನಕ್ಕೆ ಬೇಕು ಎಂದು ಹೇಳುತ್ತೇವೆ. ಕಾಶ್ಮೀರ ಭಾರತದ 45 ಕೋಟಿ ಪ್ರಜೆಗಳ ಕಿರೀಟ ಎಂದು ಹೇಳುತ್ತೇವೆ. ಸಣ್ಣ ರಾಜ್ಯ ಕೊನೆಯ ದಂಡೆಯಲ್ಲಿ ಉಳಿಸಿಕೊಳ್ಳುವ ಜನ ಸಣ್ಣ ರಾಷ್ಟ್ರ ಪುರೋಭಿವೃದ್ಧಿ ಮಾಡುವ ಜನ ನಾವು. ಇವೊತ್ತಿನ ದಿವಸ ಇರುವ 16-17 ರಾಜ್ಯಗಳನ್ನು 32 ಮಾಡಿದರೆ ತಪ್ಪು ಏನಾಗುತ್ತದೆ? ಯು.ಪಿ.ಯಲ್ಲಿ 7 ಕೋಟಿ ಜನರು ಇದ್ದಾರೆ, ಪಂಡಿತ ಜವಹರಲಾಲ್‌ರನ್ನು ಸಮಾಧಾನಪಡಿಸುವುದಕ್ಕೋಸ್ಕರ ಫಜಲಾಲಿ ಕಮೀಷನ್‌ರವರು ಅದು ಹಾಗೆಯೇ ಇರಬೇಕು ಎಂದು ಹೇಳಿದರು. ನಾನಾದರೂ ಹೇಳುತ್ತೇನೆ: 7 ಕೋಟಿ ಜನಕ್ಕೆ ಒಂದು ರಾಜ್ಯ, $1\frac{1}{2}$ ಕೋಟಿಗೆ ಒಂದು ಕೇರಳ ರಾಜ್ಯ, 4 ಕೋಟಿಗೆ ಒಂದು ಮದ್ರಾಸ್ ರಾಜ್ಯ, $4\frac{1}{2}$ ಕೋಟಿ ಜನಕ್ಕೆ ಒಂದು ಆಂಧ್ರ ಪ್ರದೇಶ, $2\frac{1}{4}$ ಕೋಟಿ ಜನರಿಗೆ ಒಂದು ಕನ್ನಡ ರಾಜ್ಯ, 3 ಕೋಟಿ ಇರುವುದಕ್ಕೆ ಒಂದು ಒರಿಸ್ಸಾ ರಾಜ್ಯ ಹೀಗಾಗಿರುವುದರಲ್ಲಿ ತಪ್ಪು ಏನಾದರೂ ಇದೆಯೇ ಎಂದು ಕೇಳುತ್ತೇನೆ. ಈಗೇನೋ ನೀವು ಅಧಿಕಾರದಲ್ಲಿ ಇದ್ದೀರಿ, ಗುಂಪು ಕಟ್ಟಿದ್ದೀರಿ. ಇವೊತ್ತು ಅಲ್ಲ ನಾಳೆ ಅಧಿಕಾರಕ್ಕೆ ಬರುವ ಜನ ಯಾವರೀತಿ ಯೋಚನೆ ಮಾಡುತ್ತಾರೆ ಎಂಬುದನ್ನು ಗಮನಿಸಿ, ನಮವಾಗಿ ಹಂಚಿಬಿಡಿ. 7 ಕೋಟಿ ಇರುವ ಉತ್ತರಪ್ರದೇಶ ರಾಜ್ಯವನ್ನು 3 ರಾಜ್ಯಗಳಾಗಿ ಮಾಡಿ, $1\frac{1}{2}$ ಕೋಟಿ ಇರುವುದಕ್ಕೆ ಒಂದು ವಿಯಬಲ್ ಅಡ್ಮಿನಿಸ್ಟ್ರೇಷನ್ ಯೂನಿಟ್ ಮಾಡಿ, 10 ಜಿಲ್ಲೆಗೆ ಒಂದು ರಾಜ್ಯ ಮಾಡಿ. ಶ್ರೀ ಗುರೆಡ್ಡಿಯವರು ಹೇಗೆ ಬೆಳಗಾಮ್, ಕಾರವಾರ, ನಿಪ್ಪಾಣಿಯನ್ನು ಮಹಾರಾಷ್ಟ್ರದವರಿಗೆ ಬಿಟ್ಟುಕೊಡುವುದಕ್ಕೆ ತಯಾರಿಲ್ಲವೋ, ಹಾಗೆಯೇ ನಮ್ಮ ಕಷ್ಟವನ್ನು ನಾವು ತಿಳಿದುಕೊಳ್ಳುವುದಕ್ಕೆ ತಯಾರಿಲ್ಲ. ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಇವೊತ್ತು ಮೈಸೂರು ರಾಜ್ಯದಲ್ಲಿ ಶ್ರೀಮಾನ್ ಕಂಠಿಯವರು ಎಷ್ಟರ ಮಟ್ಟಿಗೆ ಬಾಯಲ್ಲಿ ಉತ್ತರ ಹೇಳುತ್ತಿದ್ದಾರೋ ಅಷ್ಟರಮಟ್ಟಿಗೆ ಕಾಗದದಲ್ಲಿ ಬರೆದಿದ್ದರೆ ಈ ರಾಜ್ಯದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗುತ್ತಿರಲಿಲ್ಲ. ಒಬ್ಬ ಒಕ್ಕಲಿಗ ಅಧಿಕಾರಿ ಮೇಲೆ ಇದ್ದು ಒಬ್ಬ ಲಿಂಗಾಯಿತ ಕೆಳಗೆ ಇದ್ದರೆ, ಕೆಳಗಿರುವವನನ್ನು ಹೇಗೆ ಮೇಲಕ್ಕೆ ತರಬೇಕು ಎಂದು ನೋಡುತ್ತಾರೆ. ಅವನಿಗೆ ಹೇಗೆ ಸ್ಥಾನಮಾನ ಕೊಡಬೇಕು ಎಂದು ಪ್ರಯತ್ನಮಾಡುವುದನ್ನು ನಾನು ಅಡ್ಮಿನಿಸ್ಟ್ರೇಟೀವ್ ರೀಫಾರಂಸ್ ಕಮಿಟಿ ಮುಂದೆ ಹೇಳಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಕನ್ನಡ ರಾಜ್ಯದಲ್ಲಿ, ಜನ ತಿಳಿದುಕೊಂಡಿರುವಷ್ಟರ ಮಟ್ಟಿಗೆ ವಿಶಾಲ ರಾಜ್ಯದಲ್ಲಿ, ಕಾಂಗ್ರೆಸ್ ಪ್ರಭುತ್ವ ಇಲ್ಲ, ಜಾತಿ ಪ್ರಭುತ್ವ ಇದೆ. 19 ಜನ ಸೂಪರಿಂಟೆಂಡಿಂಗ್ ಇಂಜಿನೀಯರುಗಳನ್ನು ಸೂಪರ್‌ಸೀಡ್ ಮಾಡಿ ಒಬ್ಬ ಲಿಂಗಾಯಿತರನ್ನು ಚೀಫ್ ಇಂಜಿನೀಯರ್ ಮಾಡಿದರು. ಕಾರಣ ಏನು? ನಾನು ಮುಖ್ಯಮಂತ್ರಿಗಳ ಛೇಂಬರಿನಲ್ಲಿ ಕುಳಿತಿದ್ದೆ. 3 ಜನ ಕಾಂಗ್ರೆಸ್ ಮುಖಂಡರು ಬಂದರು ಫೈಲ್ ತರಿಸಿದರು, ಅಲ್ಲಿಯೇ ಆರ್ಡರ್ ಮಾಡಿದ್ದಾರೆ "this order must be issued within 4 O' clock" ಎಂದು ಹೇಳಿದರು.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಒಂದೊಂದು ಡಿಸ್ಟ್ರಿಕ್ಟ್ ಯೂನಿಟ್ ಮಾಡಿದರೆ ಸರಿಹೋಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ವೆಂಕಟಗಿರಿಯಪ್ಪನವರು ಸ್ವಂತ ಬುದ್ಧಿಯಿಂದ ಮಾತನಾಡುತ್ತಾ ಇಲ್ಲ. ಶ್ರೀ ಎಂ.ಸಿ. ಬಸಪ್ಪನವರು ಕುಳಿತುಕೊಂಡು ಚುಚ್ಚುತ್ತಾ ಇದ್ದಾರೆ. ಶ್ರೀ ವೆಂಕಟಗಿರಿಯಪ್ಪನವರ ಸ್ವಂತ ಬುದ್ಧಿಯಿಂದ ಆ ಮಾತುಗಳು ಬಂದಿದ್ದರೆ ಅದಕ್ಕೆ ನಾನು ಉತ್ತರ ಹೇಳುವುದಕ್ಕೆ ತಯಾರಾಗಿದ್ದೆ. ಮಾನ್ಯ ಶ್ರೀ ಬಸಪ್ಪನವರು ಕೇಳುವ ಪ್ರಶ್ನೆಗೆ ನಾನು ಹೇಳುತ್ತೇನೆ. 3 ಜಿಲ್ಲೆ ಹೋಗುತ್ತದೆ ಎಂದು ನಿನ್ನೆ ದಿನ ಚರ್ಚೆ ಆಯಿತು. ನನಗೆ 2 ರಾಜ್ಯ ಬೇಕು ಎಂದು ಹೇಳಲು 10 ನಿಮಿಷ ಕೊಟ್ಟರೆ ನಾನು ಹೇಳುತ್ತೇನೆ. ನಾನು ಸರ್ವಜ್ಞನಲ್ಲ, ನನಗೆ ಬಸವಣ್ಣನವರ ವಚನ ಗೊತ್ತಿಲ್ಲ, ಅಂಕಿ ಅಂಶ ನನ್ನ ಮುಂದೆ ಇದೆ. ಅದನ್ನು ತಯಾರು ಮಾಡಿದ್ದೇನೆ ಅದನ್ನು ಮಾತ್ರ ಹೇಳುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—On a point of order, Sir. ಈ ತರಾವನ್ನು ಮಾನ್ಯ ಶ್ರೀ ಚನ್ನಬೈರೇಗೌಡರು ತಂದರು. ಇದನ್ನು ಸ್ವತಂತ್ರ ಪಾರ್ಟಿ ಲೀಡರ್ ಆದಂಥ ಶ್ರೀ ಕಾಶೀಮಠ್ ಸಿದ ಯ್ಯನವರು ಬೆಂಬಲ ಕೊಟ್ಟು, ನಂತರ ತಂದರೋ ಅಥವಾ ವೈಯಕ್ತಿಕವಾಗಿ ತಂದರೋ ಎನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ ?

MR. DEPUTY SPEAKER.—There is no point of order.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ —ಅದಕ್ಕೋಸ್ಕರವಾಗಿ ಹೇಳುತ್ತಾ ಇದ್ದೇನೆ. ನೀವು ಪ್ರಮೋಷನ್ ಕೊಡುವಾಗ, ಅಪಾಯಿಂಟ ಮೆಂಟ್ ಮಾಡುವಾಗ, ನ್ಯಾಳಗಳನ್ನು ಕೊಡುವಾಗ, ಜಾತಿ ನೋಡುತ್ತೀರಿ, ಯಾರು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇರಬೇಕು ಎಂದು ನೋಡುತ್ತೀರಿ. The Chief Minister who is in charge of Administration is in entire supervision of the State and the Education Minister who is holding Education Portfolio is spending more than Rs. 35 crores. He helps all men belonging to one community. But what about the Industries Minister who spends nearly 38 crores ? ಯಾವ ಇಂಡಸ್ಟ್ರಿ ಜನರಲ್ ಮ್ಯಾನೇಜರ್‌ಆಗಲಿ, ಮ್ಯಾನೇಜಿಂಗ್ ಡೈರಕ್ಟರ್ ಆಗಲಿ, ಸೆಕ್ರೆಟರಿಗಳಾಗಲಿ, ಮತ್ತೊಬ್ಬರಾಗಲ ಅವರೆಲ್ಲಾ ಒಂದೇ ಜಾತಿಯ ಜನ ಆಗಿರಬೇಕು ; ಪಿ. ಡಬ್ಲ್ಯು. ಡಿ. ಮಿನಿಸ್ಟರಿಗೆ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಚೀಫ್ ಇಂಜಿನೀಯರ್ 9 ಜನ, ಇರತಕ್ಕವರಲ್ಲಿ 7 ಜನ ಒಂದೇ ಜಾತಿಯವರಿರಬೇಕು ! ನನಗಾದರೂ ಅನಿಸುತ್ತದೆ : ಹಿಂದೆ ಬ್ರಾಹ್ಮಣರು 5 ಸಾವಿರ ವರ್ಷ ರಾಜ್ಯಭಾರ ಮಾಡಿದರೂ ಯಾವುದೇ ಒಂದು ಜಾತಿಯನ್ನು ತುಳಿಯಬೇಕು ಎನ್ನುವ ಪ್ರಯತ್ನ ಮಾಡಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. 10 ವರ್ಷ ನಿಮ್ಮ ಕೈಯ್ಯಲ್ಲಿ ಅಧಿಕಾರ ಸಿಕ್ಕಿದ ಮೇಲೆ ಎಲ್ಲಾ ಜನಾಂಗವನ್ನೂ ತುಳಿದು ಜನರ ನಿಟ್ಟುಸಿರಿನ ಮಧ್ಯದಲ್ಲಿ ರಾಜ್ಯ ಕಟ್ಟಬೇಕು ಎಂದು ಹೇಳಿದರೆ, ಆ ರಾಜ್ಯ ತುಂಡಾಗದೆ ಇರಬೇಕೆಂದರೆ ಹೇಗೆ ಸಾಧ್ಯ ! ಇನ್ನು ಮುಂದಕ್ಕೆ ಹೋಗೋಣ. ಇವತ್ತಿನ ದಿವನ ಎನ್ ಜಿ.ಇ.ಎಫ್. ತೆಗೆದುಕೊಳ್ಳೋಣ, ಭದ್ರಾವತಿ ತೆಗೆದುಕೊಳ್ಳೋಣ, ರೆಮ್‌ಕೋ ತೆಗೆದುಕೊಳ್ಳಿ, ಇಂಡಸ್ಟ್ರೀಸ್ ಸೆಕ್ರೆಟರಿ ತೆಗೆದುಕೊಳ್ಳಿ, ಎಲ್ಲಾ ಇದೇ.

ಶ್ರೀ ಸಿದ್ದಯ್ಯ ಕಾಶೀಮಠ.—ಇಂಡಸ್ಟ್ರೀಸ್ ಸೆಕ್ರೆಟರಿ ಅವರು ಅಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಸರಿಯಾಗಿ ತಿಳಿದುಕೊಳ್ಳಲಿಲ್ಲ.

MR. DEPUTY SPEAKER.—No names please.

† ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—REMCO ದಲ್ಲಿ ಯಾರು, ಸ್ವಾಮಿ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ಸುಬ್ರಹ್ಮಣ್ಯ ಅವರು ನಿಮ್ಮವರಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅವರಿಗೆ ಒಂದು ಮಾತನ್ನು ನಾನು ಹೇಳುತ್ತೇನೆ. ಅದೆಲ್ಲಾ ಸೀನಿಯಾರಿಟಿ ಪ್ರಕಾರ ಆಗಿದೆ. ಅವರು ಹೇಳುವ ಪ್ರಕಾರ ಕೇವಲ ನಮ್ಮ ಜಾತಿಯವರಿಗೆ ವಿಷ ಕೊಟ್ಟು ಕೊಂದುಹಾಕಿದರೆ ಚೆನ್ನಾಗಿರುತ್ತದೆ.

ಶ್ರೀ ಜಿ. ಮರುಳಪ್ಪ (ಕಡೂರು).—ಅವರು ವಿಷ ಕೊಟ್ಟರೂ ನಾವು ಸಾಯುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಐದು ವರ್ಷಗಳಲ್ಲಿ ಎಷ್ಟು ಜನ ಬ್ರಾಹ್ಮಣರಿಗೆ ಲಿಂಗಾಯತರು ವಿಷ ಕೊಟ್ಟಿದ್ದಾರೆಂಬುದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಲಿ. ಎಷ್ಟು ಜನರನ್ನು ಹಾಳು ಮಾಡಿದ್ದಾರೆಂಬುದನ್ನು ತಿಳಿದುಕೊಳ್ಳಲಿ.

SRI C. R. RANGE GOWDA.—Sir, I raise a point of order. ಈ ಸಭೆಯಲ್ಲಿ ನಾವು ಚರ್ಚೆ ಮಾಡುವಾಗ ಕಾನೂನುಬದ್ಧವಾಗಿ ಮಾತನಾಡಬೇಕು ಎನ್ನುವ ನಿಯಮವಿದೆ. ಅಧಿಕಾರಕ್ಕೋಸ್ಕರ ಯಾರನ್ನಾದರೂ ವಿಷ ಕೊಟ್ಟು .....ಎಂದು ಎಲ್ಲಾ ಹೇಳುವುದು ಸರಿಯೇ ಎಂದು ತಿಳಿಸಬೇಕು.

ಶ್ರೀ ಎಸ್. ಆರ್. ಕಂಠಿ.—ಸ್ವಾಮಿ, ಅವರು ನಾನು ಹೇಳಿದ್ದನ್ನು ಅರ್ಥಮಾಡಿಕೊಳ್ಳಲಿಲ್ಲ.

MR. DEPUTY SPEAKER.—I do not think there is any point of order in that.

SRI S. R. KANTHI.—I raise a point of order. The Hon'ble Member is saying that there is communalism in the Education Department. I give him a challenge and I am going to place whatever allegations he is going to make against the Education Department will be placed before an impartial Judge of a High Court. I will make an offer that impartial Judge of the High Court of Mysore or any other High Court Judge be appointed to go into the promotions and the allegations made by my Hon'ble friend. If these allegations are proved true, then any action that the Chief Minister wants to take against me, may be taken.

MR. DEPUTY SPEAKER.—As regards the point of order, although I say there is no point of order, one remark I wish to make : Members while making allegations, should not choose to make such wild allegations. If there is any substance, they should base it on facts. We should not make unnecessary and uncharitable remarks.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಉಪಾಧ್ಯಕ್ಷರು ಏನು ಹೇಳಿದ್ದಾರೆ, ಯಾವ ಚಾರ್ಜಶೀಟನ್ನ ಮೇಲೆ ಒಂದು ಮಾತನ್ನು ಹೇಳುತ್ತಾರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಅವರು ಹೇಳುತ್ತಾರೆ, ಕಮಿಶನ್ ನೇಮಕ ಮಾಡುತ್ತಾರೆ, ಅದು ಅನ್ಯಾಯವಾದುದನ್ನು ಎನ್‌ಕ್ವಾಯರಿ ಮಾಡುತ್ತಾರೆ ಎಂದು. ಅವರು ಅನ್ಯಾಯ ಮಾಡಿಲ್ಲವೆಂಬುದನ್ನು ತೋರಿಸಲು ಅದಕ್ಕೆ ಒಂದು ಆಯೋಗ ನೇಮಕ ಮಾಡುವುದಾದರೆ, ನಾನು ಮಾಡಿರತಕ್ಕ ಆಪಾದನೆಗಳನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಅದನ್ನು ಬೇಕಾದರೆ ನಾನು ಅಂಕಿ ಅಂಶಗಳಿಂದ ರುಜುವಾತು ಮಾಡುತ್ತೇನೆ. ಈಗ ನಲ್ವತ್ತು ಎಕ್ಸಿಕ್ಯುಟಿವ್ ಇಂಜಿನಿಯರುಗಳನ್ನು ಸೂಪರ್‌ಸೀಡ್ ಮಾಡಿ ಒಬ್ಬರಿಗೆ ಪ್ರಮೋಶನ್ ಕೊಡಲಿಲ್ಲವೇ ? ಮತ್ತು ಲಾ ಡಿಪಾರ್ಟ್‌ಮೆಂಟ್ ರಿಜೆಕ್ಟ್ ಮಾಡಿದರೂ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಲೇಬೇಕೆಂದು ಹೇಳಿಲ್ಲವೇ ? ನಾನು ಶ್ರೀಮಾನ್ ಕಂಠಿಯವರನ್ನು ವೈಯಕ್ತಿಕವಾಗಿ ಟೀಕಿಸುತ್ತಾ ಇಲ್ಲ. ಆದರೆ ಅವರ ಆಡಳಿತವನ್ನು ಹೇಳುತ್ತಿದ್ದೇನೆ. ಶ್ರೀಮಾನ್ ಕಂಠಿಯವರಿಗೆ ದೇಹದಲ್ಲಿ ಆರೋಗ್ಯವೂ ಈಗ ಅಷ್ಟೊಂದು ಚೆನ್ನಾಗಿಲ್ಲ. ಇನ್ನು ವಿದ್ಯಾ ಇಲಾಖೆಯಲ್ಲಿ ಒಬ್ಬರನ್ನು ಡೈರೆಕ್ಟರ್ ಮಾಡಬೇಕೆಂದು ಸರ್ಕಾರದ ಎಲ್ಲಾ ಫೈಲನ್ನೂ ಕೊಟ್ಟಿದ್ದಾರೆ. ಇದನ್ನು ಶ್ರೀ ಕಂಠಿಯವರು ಒಪ್ಪುತ್ತಾರೋ ಎಂದು ಕೇಳಿ, ಸ್ವಾಮಿ.

ಶ್ರೀ ಎಸ್. ಆರ್. ಕಂಠಿ.—ನನಗೆ ಇದು ಅರ್ಥವಾಗುವುದಿಲ್ಲ, ಯಾರನ್ನು ಏನು ಎಂದು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಏನು ಮಾಡಿದ್ದೀರಿ ?...ಈ ರಾಜ್ಯದಲ್ಲಿ.....

SRI S. R. KANTHI.—It is all false.

SRI K. P. GADAG (Gadag).—I raise a point of order, Sir.

ಅನೇಕ ಮಾನ್ಯ ಸದಸ್ಯರು ಈ ಮೋಶನ್ ಬಗ್ಗೆ ಮಾತಾಡಿದ್ದಾರೆ. ಈಗ ಮಾತನಾಡುತ್ತಿರುವ ವಿಷಯ ಕರ್ನಾಟಕದ ಬಗ್ಗೆ. ಈ ವಿಷಯವನ್ನು ಬಿಟ್ಟು ಇನ್ನೊಂದು ಅಡ್ಮಿನಿಸ್ಟ್ರೇಷನ್ ಬಗ್ಗೆ ಹಾಗೂ ಇನ್ನಿತರ ವಿಷಯಗಳನ್ನು ಮಾತನಾಡುತ್ತಾ ವೇಳೆ ವ್ಯರ್ಥ ಮಾಡುವುದಕ್ಕಿಂತ ಈ ವಿಷಯ ಎಷ್ಟುಮಟ್ಟಿಗೆ ಬರಬೇಕೆಂಬುದನ್ನು ನಿರ್ಣಯ ಮಾಡಬೇಕು.

MR. DEPUTY SPEAKER.—The Hon'ble Member Sri K. P. Gadag through a point of order asks the Chair to see how far it is relevant. I can assure him that if there is any irrelevant matter the Chair will cut it down.

SRI K. S. SURYANARAYANA RAO.—I raise a point of order. In his anxiety to raise a point of order, the Hon'ble Member Sri Gadag said that we are wasting the time of this House. Is it not a reflection on the debate going on in this House and if so, what is the ruling of the Chair ?

MR. DEPUTY SPEAKER.—That is the wrong opinion of the Member. That is all.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ಗದಗ್‌ರವರು ನನ್ನನ್ನು ಬರೀ ಅಡ್ಮಿನಿಸ್ಟ್ರೇಷನ್ನಿನ ವಿಚಾರ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಅವರು ವಯಸ್ಸಿನಲ್ಲಿ ನನಗಿಂತ ದೊಡ್ಡವರು. ಆದರೂ ಈ ವಿಚಾರದಲ್ಲಿ.....

MR. DEPUTY SPEAKER.—The Hon'ble Member must conclude in five minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ನಾವು ರಾಜ್ಯ ವಿಸ್ತಾರ ಆಗಬೇಕು; ರಾಜ್ಯದಲ್ಲಿ ಒಂದು ಸರ್ಕಾರ ಇರಬೇಕು; ಎಲ್ಲರಿಗೂ ಇದರಲ್ಲಿ ಪ್ರಾತಿನಿಧ್ಯವಿರಬೇಕು; ಎಂದು ಹೇಳುವುದರಲ್ಲಿ ಅರ್ಥ ವೇನು ? ಯಾರೋ ಒಬ್ಬರ ಕೈಯಲ್ಲಿ ಅಧಿಕಾರ ಕೊಟ್ಟು ಅವರು ಎಲ್ಲರನ್ನೂ ಚಾವಟಿ ಹಿಡಿದು ಕೊಂಡು ಹೊಡೆಯಲಿ ಎಂತಲೇ ?

ಶ್ರೀ ಕೆ. ಪಿ. ಗದಗ್.—ಈ ಮಾನ್ಯ ಸಭೆಯಲ್ಲಿ ಮುಸ್ಲಿಮರು, ಲಿಂಗಾಯತರು, ಹರಿಜನರು ಎಂದೆಲ್ಲಾ ಹಲವು ಕೋಮುಗಳನ್ನು ಹಿಡಿದು ಮಾನ್ಯ ಸದಸ್ಯರು ಮಾತನಾಡುವುದು ಸರಿಯಲ್ಲ. ನಮ್ಮ ದೇಶ ಜಾತ್ಯತೀತ, ಪ್ರಗತಿಶೀಲ ರಾಷ್ಟ್ರವೆಂದು ಸೇರಿಕೊಳ್ಳುತ್ತಾ, ಈ ರೀತಿ ಕೋಮು ವಾರು ಭಾವನೆಯನ್ನು ಬಿತ್ತುವುದು ಸಾಧುವಲ್ಲ. ಎರಡನೆಯದಾಗಿ ಸದಸ್ಯರುಗಳು ಮಾತನಾಡು ವಾಗ ಹೆಸರು ಹೇಳಿ ಆಪಾದನೆಗಳನ್ನು ಮಾಡಬಾರದೆಂದು ಹೇಳಿದ್ದೀರಿ. ಹೀಗಿರುವಲ್ಲಿ ಈ ಸದಸ್ಯರು—'ಇವರು, ಅವರು' ಎಂದು ಕೈತೋರಿಸುತ್ತಾ ವ್ಯಕ್ತಿಯನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ. ತಾವು ದಯವಿಟ್ಟು ಒಂದು ರೂಲಿಂಗ್ ಕೊಟ್ಟು ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಾತಿಯ ವಿಷಯ ಎತ್ತಕೂಡದೆಂದು ಹೇಳಿದರು. ಮಹಾ ರಾಷ್ಟ್ರದವರು ಮಾತನಾಡಿದರೆ ಶ್ರೀ ಗದಗ್‌ರವರು ಹೇಗೆ ಸಹಿಸುವುದಕ್ಕಾಗುವುದಿಲ್ಲವೆನ್ನುತ್ತಾರೋ ಹಾಗೆಯೇ ನಾನೂ ಇಲ್ಲಿ ಜಾತಿಗಳ ವಿಷಯದಲ್ಲಿ ಆಗುತ್ತಿರುವ ಅನ್ಯಾಯವನ್ನು ಸಹಿಸುವುದಕ್ಕಾಗು ವುದಿಲ್ಲ. ಶ್ರೀಮಾನ್ ಗದಗ್‌ರವರು ವಯಸ್ಸಿನಲ್ಲಿ ದೊಡ್ಡವರು ಅವರು ನಾನೇಕೆ ಕೇಳುತ್ತಿದ್ದೇ ನೆಂಬುದನ್ನು ದಯವಿಟ್ಟು ತಿಳಿದುಕೊಳ್ಳಬೇಕು. ನನಗೆ ನೋವಾಗಿದೆ. ಅದಕ್ಕೆ ಚಿಕಿತ್ಸೆಯನ್ನು ಡಾಕ್ಟರಲ್ಲಿ ಕೇಳುತ್ತಿದ್ದೇನೆಂದು ಅವರು ಅರ್ಥಮಾಡಿಕೊಳ್ಳಬೇಕು. ಇದರಲ್ಲಿ ರಾಜಕಾರಣವೇನೂ ಇಲ್ಲ. ಮೈಸೂರಿನ ರಾಜ್ಯದವರಾಗಿ, ಮೈಸೂರಿನ ಜನತೆಯಾಗಿ ಹಳೆಯ ಮೈಸೂರಿನಲ್ಲಿ ಒಕ್ಕಲಿಗರೂ, ಲಿಂಗಾಯಿತರೂ, ಹರಿಜನರೂ, ಮುಸಲ್ಮಾನರೂ—ಎಲ್ಲರೂ ಇದ್ದಾರೆ. ಆದರೆ ಈ ವಿಷಯಕ್ಕೆ ಮಟ್ಟಿಗೆ ಅವರು ಯಾರೂ ಇಲ್ಲವೆಂತಲೇ. ಆದ್ದರಿಂದ ನಾನು ಹೇಳಿದಂತೆ ರಾಜ್ಯವನ್ನು ವಿಭಜನೆ ಮಾಡಿ. ಆ ಕಡೆಯ ರಾಜ್ಯಕ್ಕೆ ಬೇಕಾದರೆ ಕಂಠಿಯವರೇ ಮುಖ್ಯಮಂತ್ರಿಗಳಾಗಲಿ, ಶ್ರೀ ಜತ್ತಿ ಯವರೇ ಫೈನಾನ್ಸ್ ಮಿನಿಸ್ಟರಾಗಲಿ. ಆಗ ನಮಗೂ ಏನೂ ಬಾಧೆಯಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ಯಾಮೀ.....

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಗುರೆಡ್ಡಿಯವರಿಗೆ ಏನು ಕಷ್ಟವಿದೆಯೆಂದು ನನಗೆ ಗೊತ್ತಿದೆ. ಅವರೂ ಈ ರಾಜ್ಯ ಎರಡಾಗಬೇಕೆಂದು ಹೇಳುವುದಕ್ಕೆ ತಯಾರಾಗಿದ್ದಾರೆ. ಆದರೆ ಹಾಗೆ ಹೇಳಿದರೆ ಅಲ್ಲಿ ಅವರ ತಲೆ ಉಳಿಯುವುದಿಲ್ಲ.

ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್‌ರವರು ಬರೆದಿರುವ ಒಂದು ಪುಸ್ತಕವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅವರು ರಾಜ್ಯ ವಿಭಜನೆಯಾಗಬೇಕೆಂದು ಹೇಳಿ ಒಂದು ಪುಸ್ತಕ ಬರೆಯು ವಾಗ, ಅವರು ಬಹು ದೀರ್ಘವಾಗಿ ವಿಮರ್ಶೆಮಾಡಿ ಕರ್ನಾಟಕ ರಾಜ್ಯವೆಂಬುದು ಅರ್ಥಾತ್ ಒಂದೇ ರಾಜ್ಯವಲ್ಲ ಎಂದು ಹೇಳಿದ್ದಾರೆ. ಡಾ. ಅಂಬೇಡ್ಕರ್‌ರವರು ಒಬ್ಬ ಉತ್ತಮ ಭಾಷ್ಯ ಕಾರರು. ಅವರು ಬರೆದಿರುವ ಭಾಷ್ಯದ ಪ್ರಕಾರ ಕರ್ನಾಟಕವೆಂದು ರಾಜ್ಯವಾದರೆ ಅದು ಒಂದೇ ಒಂದು ಕೋಮಿನ ರಾಜ್ಯವಾಗುತ್ತದೆಂದು ತಿಳಿಸಿದ್ದಾರೆ. ಇದು ಎಂದೋ ನಮಗೆ ಅನುಭವ ಬರುವುದಕ್ಕಿಂತ ಮುಂಚೆಯೇ ಹೇಳಿದ ಮಾತುಗಳು. ಇಂದು 1957ನೆಯ ಇಸವಿಯಿಂದ 1966ನೆಯ ಇಸವಿ ಜುಲೈ ಒಂದನೆಯ ತಾರೀಖಿನವರೆಗೆ ನಮಗೆ ಉಂಟಾಗಿರುವ ಅನುಭವವನ್ನೂ ಹೇಳುವು ದಾದರೆ, ಡಾ. ಅಂಬೇಡ್ಕರ್‌ರವರು ಹೇಳಿದ ಅಭಿಪ್ರಾಯಗಳು ಸತ್ಯವಾಗಿವೆ.

ಶ್ರೀ ದೊಡ್ಡಮೇಟಿ (ರೋಣ್).—ಡಾ. ಅಂಬೇಡ್ಕರ್‌ರವರು ಅದನ್ನು ಬರೆದದ್ದು ಕೇವಲ ಉತ್ತರ ಕರ್ನಾಟಕದ ಭಾಗಗಳು ಬೇರೆಯಾಗಬೇಕೆಂಬ ನಿರ್ಣಯ ಬಂದಿದ್ದಾಗ. ಹಾಗಾದರೆ ನೀವು ಹೇಳಿದಂತಾಗುತ್ತದೆಂದು ಹೇಳಿದರೇ ಹೊರತು ವಿಶಾಲ ಕರ್ನಾಟಕವಾಗುವುದನ್ನು ಅವರೇನೂ ವಿರೋಧ ಮಾಡಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ವಿಶಾಲ ಕರ್ನಾಟಕವನ್ನೂ ಹೇಳಲಿಲ್ಲ, ಬರೀ ಉತ್ತರ ಕರ್ನಾಟಕವನ್ನೂ ಹೇಳಲಿಲ್ಲ. ಆ ಕರ್ನಾಟಕ, ಈ ಕರ್ನಾಟಕವೆಂಬ ಮಾತೇ ಅಲ್ಲಲ್ಲ ! 1937ರಲ್ಲಿ ಅವರು ಕೊಟ್ಟಂಥ ಭವಿಷ್ಯ ಇಂದು ಅಕ್ಷರಶಃ ರುಜುವಾತಾಗಿದೆ. ಆದ್ದರಿಂದ ಇದನ್ನು ಸಹಿಸಲು ಸಾಧ್ಯವಿಲ್ಲ. ನನ್ನ ತಾಲ್ಲೂಕಿನ ಉದಾಹರಣೆಯನ್ನೇ ಹೇಳುತ್ತೇನೆ. 100–200 ಮನೆಗಳು ಕೂಡ ಅಲ್ಲಲ್ಲ. ಅಣ್ಣತಮ್ಮಂದಿರಂತೆ ನೆಮ್ಮದಿಯಿಂದ ನಾವೆಲ್ಲರೂ ವಾಸ ಮಾಡುತ್ತಿದ್ದೆವು. ಪ್ರತಿಯೊ

ಬ್ಬರೂ ಒಬ್ಬರಿಗೊಬ್ಬರು ನೆರವಾಗುತ್ತಿದ್ದರು. ಅಂಥ ಕಡೆ ಕಂಠಿಯವರು ಅಧಿಕಾರಕ್ಕೆ ಬಂದ ಮೇಲೆ, ಅಲ್ಲಿ ಲಿಂಗಾಯತರೆಷ್ಟು ಅವರಿಗೇನು ರಕ್ಷಣೆಯಿದೆ, ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗಳಿಗೆ ಏಕೆ ಅರ್ಜಿ ಹಾಕಲಿಲ್ಲ, 25,000 ರೂಪಾಯಿ ಕೊಡುತ್ತೇನೆ ಅಸೆಂಬ್ಲಿಗೆ ಹೋಗುವುದನ್ನು ತಪ್ಪಿಸಿ–ಎಂದೆಲ್ಲಾ ಆ ಜನರನ್ನು ಕೇಳುತ್ತಾ ಎಂಥ ವಿಷ ಬೀಜವನ್ನು ಬಿತ್ತಿದ್ದಾರೆ !

ನಿಮಗೆ ಅಂಕಿಅಂಶಗಳು ಬೇಕೆಂದಿದ್ದರೆ ಒಂದು ಕಮೀಷನ್ನನ್ನು ನೇಮಕ ಮಾಡಿ ಆ ಕಮೀಷನ್ನಿನ ಮುಂದೆ ಎಲ್ಲಾ ವಿವರಗಳನ್ನೂ ನಾನು ಇಡುತ್ತೇನೆ. ನಾನು ಹೇಳುವುದರಲ್ಲಿ ನ್ಯಾಯವಿದೆ ಯೆಂಬುದು ತವಗೇ ವೇದ್ಯವಾಗುತ್ತದೆ. ಅದು ಬಿಟ್ಟು S. R. C. ರಿಪೋರ್ಟ್‌ನ್ನು ಮಾತ್ರ ಹಿಡಿದುಕೊಂಡರೆ ನಿಮಗಿದು ಗೊತ್ತಾಗುವುದಿಲ್ಲ. ಅಂತೂ ನಮ್ಮ ಮೈನೂರಿನವರು ನಿಜಲಿಂಗಪ್ಪ ನವರ ಆಡಳಿತದ ಹಿಡಿತದಲ್ಲಿ ಸಿಕ್ಕಿಕೊಂಡು ಕಾಂಗ್ರೆಸ್ ಎಂಬ ಸಂಸ್ಥೆಯ ನೆರಳಿನಲ್ಲಿರುವ ಒಂದೇ ಒಂದು ಕೋಮಿನ ಜನರಿಂದ ಆಳಲ್ಪಡುವಂತಾಗಿದೆ. ಹೆಸರಿಗೆ ಮಂತ್ರಿಗಳು 26 ಇದ್ದರೂ, ಅಧಿಕಾರವೆಲ್ಲಾ 5 ಜನರ ಕೈಯಲ್ಲಿ ಮಾತ್ರ !! ಮಠಾಧಿಪತಿಗಳು ಎಲ್ಲಾ ವಿಷಯಗಳಲ್ಲೂ ಕೈಹಾಕ ಕೊಡಗಿದ್ದಾರೆ, ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟುಬೇಕೆಂದರೆ ಆ ಕೋಮಿನ ಜನ ಹೋದರೆ ಮಾತ್ರ ಸಿಕ್ಕುತ್ತದೆ. ಅವರಿಲ್ಲದಿದ್ದರೆ ಮೆರಿಟ್ ಅರ್ಹತೆ ಯಾವುದರಲಿ ಸಿಕ್ಕುವುದಿಲ್ಲ.

ಶ್ರೀ ಎ. ಶರಣಪ್ಪ (ದೇವದುರ್ಗ).—ಈ ಮಾನ್ಯ ಸಭೆಯಲ್ಲಿ ಈ ರೀತಿ ಮತಗಳ ವಿಚಾರ ಎತ್ತು ವುದು ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೇಕಾದರೆ ಅಂಕಿಅಂಶಗಳನ್ನು ಒದಗಿಸಬಹುದು. ಒಂದು ಕಮೀಷನ್ನನ್ನು ನೇಮಕ ಮಾಡಿ ಈ ರಾಜ್ಯದಲ್ಲಿ ನಡೆದಿರುವ ಅತ್ಯಾಚಾರಗಳೇನು—ಪ್ರಮೋಷನ್ನಿನ ವಿಚಾರದಲ್ಲಾಗಲಿ, ಹೊಸ ಹುದ್ದೆಗಳನ್ನು ಕೊಡುವುದರಲ್ಲಾಗಲೀ, ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ, ಅಸೆಂಬ್ಲಿಗಳಿಗೆ ಮೆಂಬರುಗಳನ್ನು ಚುನಾಯಿಸುವುದರಲ್ಲಾಗಲೀ ಏನೇನು ಅನ್ಯಾಯ ನಡೆದಿದೆ ಯೆಂಬುದನ್ನು ತೋರಿಸಿಕೊಡುತ್ತೇನೆ. ಯಾವ್ಯಾವ ಕಾಲೇಜುಗಳಲ್ಲಿ ಯಾವ್ಯಾವ ಕೋಮಿನವರು ಎಷ್ಟೆಷ್ಟು ಜನರಿದ್ದಾರೆಂಬುದನ್ನು ಕೂಡ ಒದಗಿಸಿಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಆಗಲಾದರೂ ಕೂಡ ಆಯೋಗ ಒಂದು ತೀರ್ಮಾನವನ್ನು ಕೊಟ್ಟರೆ ಅದರಂತೆ ನಡೆಯೋಣ.

11-30 A.M.

ಒಳ್ಳೆಯ ಆಡಳಿತ ಬರಬೇಕಾದರೇ, ಆಡಳಿತ ಬಿಗಿಯಾಗಿರಬೇಕಾದರೆ, ಆಡಳಿತ ಸುಲಲಿತವಾಗಿರ ಬೇಕಾದರೆ ದೇಶ ಒಂದು ಯಬಲ್ ಯೂನಿಟ್ ಆಗಿ ಇರಬೇಕಾದರೆ ಮೈಸೂರನ್ನು ಎರಡು ರಾಜ್ಯ ಮಾಡಬೇಕು, ಆ ರೀತಿ ಇರುವ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಕೊಡಲು ಈ ಸಭೆ ತನ್ನ ಅನು ಮೋದನೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

[MR. SPEAKER in the Chair].

MR. SPEAKER.—Now, there are only 18 minutes left.

SRI S. R. KANTHI.—Sir, I want 20 minutes.

MR. SPEAKER.—I cannot give 20 minutes. Is it the desire of the House that the time should be extended ?

SOME HON'BLE MEMBERS.—Yes.

SOME HON'BLE MEMBERS.—No.

SRI K. S. SURYANARAYANA RAO.—Sir, you may use your discretion.

MR. SPEAKER.—Discretion of the Speaker has been exhausted by extending the time by one hour. The supreme Body is the House and it may extend the time for ten days. Could we not come to some understanding in a matter like this ?

SRI S. R. KANTHI.—Sir, already one hour has been given and it is already time and it should be closed.

SRI K. S. SURYANARAYANA RAO.—Sir, before you decide, I have one submission. You were not here when the matter was being discussed. Sri Muckannappa regarding restricting time said that for a small bit of land or taluk or village in Belgaum and Karwar, we took five days and therefore.....

SRI A. J. DODDAMETI.—It is a Motion, Sir.

MR. SPEAKER.—Therefore, judging by that, we must take five months!

SRI K. S. SURYANARAYANA RAO.—We are not so unreasonable as that.

MR. SPEAKER.—Am I unreasonable?

SRI K. S. SURYANARAYANA RAO.—No, Sir; I never meant it. The Chair may extend the time by two hours or at least for the rest of the day. Then, we will be able to express ourselves.

MR. SPEAKER.—The time that is available is taken for recrimination. The only Body which can extend the time is the House. I asked by a voice vote and it feels it does not accept. If anybody wants a poll, we shall take it. Now, let the Minister intervene and by that time we shall see if anything can be done.

SRI C. J. MUCKANNAPPA.—Sir, you have felt the pulse. Because they are larger in number and when the minority wants certain help, the Chair has to come to their rescue.

MR. SPEAKER.—I entirely agree with the Hon. Member; but to what extent?

†SRI S. R. KANTHI.—Sir, I have patiently heard what the hon. members on the other side have said. The arguments advanced by the other side for bifurcating the State into two, are not convincing at all. Linguistic States were formed on the language basis; when the Suba was formed out of Punjab State, it was done on account of the fact that languages play a very important part there. When the S.R.C. submitted their report, they have remarked in their report, I remember well, that this State of Mysore will be a State where no community will be able to dominate for long. There are three big communities here—one the Lingayats, the Vokkaligas and the third is Kurubas and also the Scheduled Castes playing a very important part. They have come to the conclusion that any fear that this is going to be a communal State is not borne by facts. Hon. Member Sri Muckannappa indulged in saying that the administration was communal. Sir, it is very easy to make allegations against administration. It is for the impartial judges to come to their own conclusions so far as administration is concerned. At a particular time it is very difficult for the Hon. Member to have all the facts and figures that are with the Government. That is why, it may be possible that they have come to wrong conclusions.

I have already said that so far as Education Department is conceedu whatever promotions, whatever increments and whatever has happened n the Education Department, can be placed before a judge of an impartial

character, may be of the Mysore High Court or any other High Court and I am willing to abide by the decision he gives. But, when members make allegations against Education Department including P.W.D., I am of the opinion that they have not got full facts before them. Mere administration could not be a criterion for bifurcating the State.

Sir, Mysore State being made one was there even 45 years before it was made one. The Sahitya Parishad whose headquerters is at Bangalore advocated Karnatak with the old Mysore State including. Equally so, the M.P.C.C. from the time of its inception said that they wanted a State including the old Mysore State. That being so, it is very strange on what principles my friends on the other side who have moved the resoultion want a bifurcation of the State. We are in democracy and the people vote for us and put us into power. If the people feel that we are communal and we have not acted properly to discharge the responsibility in the way they wanted us to do, it is for them to bring us down and in democracy they do so. This being so, I do not want to plead for the administration. But what I want to say is that what the hon'ble members are after, is not a proper thing to do and they should think twice before they insist upon voting on this resolution. As you have just now said that I should not take much time, I do not want to take much time and I refute all the allegations made by the hon'ble member against the administration.

So far as allegations are concerned, if he gives me in writing, all of them will be gone into and proper replies sent. But let him not be misled that something is wrong and it must be wrong so long as he is pleased to say that they are wrong. I do not agree that the member is right and he must think as a responsible member more deeply about this problem. It is easy to raise a ghost. Once a Frankinstein is raised, it is not easy to curb it. Frankinstein has gulped those who raised him. I do not want to add more. The Government opposes this resolution and at the same time I request the mover of the resolution to withdraw it and that will be in good grace.

SRI K. S. SURYANARAYANA RAO.—Now what is the procedure? I want to speak.

MR. SPEAKER.—I said the Government wants to intervene. The reply is by Sri Channabyre Gowda.

SRI K. S. SURYANARAYANA RAO.—I know it. But I require some time.

MR. SPEAKER.—The point is this....

SRI K. S. SURYANARAYANA RAO.—When such a vital issue is discussed, it is not fair for anybody....

MR. SPEAKER.—Please don't tell me the reason. Show me the procedure. I am not concerned with the merits. Please find out the way and tell me.

SRI K. S. SURYANARAYANA RAO.—My only appeal is that this is not a question of a few persons talking about it here. It is a question of the entire State.

MR. SPEAKER.—Tell me under which rule you want me to act.

SRI K. S. SURYANARAYANA RAO.—If any other rule is not applicable you have got the discretion to extend it by at least one hour. We are staisfied if at least one hour is given to us.

MR. SPEAKER.—I take it that there is no other member who wants me to invoke anything other than my discretion. I find one hour is extended in addition to what was the allotted time by the committee. It is a committee of private member's business.

SRI K. S. SURYANARAYANA RAO.—If there is no discussion we are only parting.

MR. SPEAKER.—Order, order. I have no objection. I have given chance to Sri Channabyregowda and I am calling upon him. The only power I have is with regard to the Government business, because I happen to be the Chairman of the Business Advisory Committee. It has given me power to extend time.

SRI K. S. SURYANARAYANA RAO.—If that is the attitude.

MR. SPEAKER.—What other attitude ? Simply because the member askes...

SRI K. S. SURYANARAYANA RAO.—It is not yours, Sir. It is the Treasury benches.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಬಹಳ ಪ್ರಾಮುಖ್ಯವಾದ ವಿಚಾರವನ್ನು ನಾವು ಹೇಳುತ್ತಿದ್ದರೆ ದಬಾವಣೆ ಹೊಡುತ್ತಿದ್ದಾರೆ. ನಮಗೆ ಅಧ್ಯಕ್ಷರ ರಕ್ಷಣೆಯಾದರೂ ಸಿಕ್ಕದಿದ್ದರೆ ಕೇಳುವವರು ಯಾರು ?

ಅಧ್ಯಕ್ಷರು.—ಬೇಸರಪಟ್ಟುಕೊಂಡು ಮನಸ್ಸನ್ನು ಚಿಕ್ಕದು ಮಾಡಿಕೊಂಡರೆ ಪ್ರಯೋಜನವಿಲ್ಲ. ಯಾವರೀತಿ ಕಾಲವನ್ನು ವಿಸ್ತರಿಸಬಹುದೆಂಬುದನ್ನು ಸೂಚಿಸಿ, ಅವಕಾಶವಿದ್ದರೆ ಪ್ರಯತ್ನಮಾಡುತ್ತೇನೆ ಎಂದು ಹೇಳಿದೆ. ಇನ್ನೊಂದು ಸಲ ಬೇಕಾದರೆ ನಿರ್ಣಯ ತನ್ನಿ, ಬ್ಯಾರೆಟ್ಟಿಗೆ ಹಾಕೋಣ, ರೂಲ್ಸ್ ಅದಕ್ಕೆ ಅವಕಾಶ ಕೊಡುತ್ತದೆ. ಶ್ರೀ ಚನ್ನಬೈರೇಗೌಡರು ಉತ್ತರ ಕೊಡುವುದಾದರೆ ಕೊಡಬಹುದು.

ಶ್ರೀ ಚನ್ನಬೈರೇಗೌಡ (ಹೊಸಕೋಟೆ).—ಹಿಂದೆ ಒಂದೊಂದು ಇಷ್ಯೂಮೇಲೆ 4 ದಿವಸ ಚರ್ಚೆಯಾಗಿದೆ. ಇಂಥ ಪ್ರಾಮುಖ್ಯ ವಿಷಯದಮೇಲೆ ಇದುವರೆಗೆ ನಮ್ಮ ಕಡೆ 3 ಜನ ಆ ಕಡೆ ಒಬ್ಬರು ಮಾತನಾಡಿದ್ದಾರೆ.

ಅಧ್ಯಕ್ಷರು.—ಇದು ಪ್ರಾಮುಖ್ಯವಾದ ವಿಷಯವೆಂದು ಯಾರು ನಿರ್ಧಾರಮಾಡಿದರು ? ಸಭೆಯವರು ಒಪ್ಪದಿದ್ದರೆ ನಾನು ಒತ್ತಾಯಮಾಡುವುದಕ್ಕಾಗುವುದಿಲ್ಲ.

ಶ್ರೀ ಅಂದಾನಯ್ಯ (ಕುಣಿಗಲ್).—ದೇಶದಲ್ಲಿ ಅನ್ಯಾಯ ನಡೆಯುತ್ತಿದೆ, ಅದನ್ನು ತಡೆಗಟ್ಟುವುದಕ್ಕೆ, ಅದನ್ನು ಜನರಿಗೆ ತೋರಿಸುವುದಕ್ಕೆ ಒಂದು ಅವಕಾಶ ಕೊಡಿ.

ಅಧ್ಯಕ್ಷರು.—ನನ್ನ ಅಧಿಕಾರದಲ್ಲಿದ್ದರೆ ಅವಕಾಶ ಕೊಡಬಹುದಾಗಿತ್ತು.

ಶ್ರೀ ಅಂದಾನಯ್ಯ.—ಹಾಗೆ ಅವಕಾಶ ಕೊಡವಿದ್ದರೆ ನಾವು ಈ ಸಭೆಯಲ್ಲಿರುವುದಿಲ್ಲ ಎಂದು ಹೇಳಿ ಸಭಾತ್ಯಾಗಮಾಡಿದರು.

(The Hon'ble Member along with some others left the House.)

ಶ್ರೀ ಬಿ. ಚನ್ನಬೈರೇಗೌಡ.—ಇಂಥ ಪ್ರಾಮುಖ್ಯವಾದ ವಿಷಯಕ್ಕೆ ಕಾಂಗ್ರೆಸ್ ಸರಕಾರ ಮುನ್ನಣಿ ಕೊಡದಿರುವುದರಿಂದ ನಾನು ಜವಾಬು ಕೊಡದೆ ಸಭಾತ್ಯಾಗಮಾಡುತ್ತೇನೆ.

(The hon'ble Member left the House.)

Mr. SPEAKER.—I have no option left except to put it to the vote of the House. The question is :

"That this Assembly is of the opinion that the Government of India may be requested to take immediate steps to divide the present State of Mysore into two States for reasons of administrative viability."

The motion was negatived.

NON-OFFICIAL RESOLUTION

re : Changing the present name of Mysore State to Karnataka State.

† ಶ್ರೀ ಎ. ಜೆ. ದೊಡ್ಡಮೇಟಿ.—ಅಧ್ಯಕ್ಷ ಮಹಾಶಯರೇ 'ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

ಅಧ್ಯಕ್ಷರು.—ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ಈ ನಿರ್ಣಯ ಮಂಡಿಸಲಾಗಿದೆ. ಸಭೆಯಲ್ಲಿ ಇದು ಚರ್ಚೆಯಾಗಬಹುದು.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಈ ನಿರ್ಣಯ ಸುಮಾರು ಎರಡೂವರೆ ವರ್ಷಗಳ ಕೆಳಗೆ ಈ ಮಾನ್ಯ ಸಭೆಯ ಮುಂದೆ ಬಂದಿತ್ತು. ವಿಪುಲವಾದಂತಹ—ಕೆಲವು ಸಾರಿ ಭಾವೋದ್ರೇಕದಿಂದ ಕೂಡಿದಂತಹ ಚರ್ಚೆ ನಡೆದ ಮೇಲೆ ಈ ಸಭೆಯ ನಾಯಕರು ಒಂದು ನಿರ್ಣಯವನ್ನು ಮಂಡಿಸಿ ಈ ದೇಶದಲ್ಲಿ ತುರ್ತು ಪರಿಸ್ಥಿತಿ ಇರತಕ್ಕ ಈ ಸಂದರ್ಭದಲ್ಲಿ ಭಾವೋದ್ರೇಕವನ್ನುಂಟುಮಾಡತಕ್ಕ ಇಂತಹ ಸಮಸ್ಯೆಗಳ ಬಗ್ಗೆ ಈ ರಾಜ್ಯದ ಗಮನವನ್ನು ಹರಿಸಬಾರದು ಎಂಬ ದೃಷ್ಟಿಯಿಂದ ಈ ಚರ್ಚೆಯನ್ನು ಇನ್ನಷ್ಟು ಕಾಲದವರೆಗೆ ಮುಂದೆ ಹಾಕಬೇಕೆಂಬ ಸೂಚನೆಯನ್ನು ಆಗ ವಿನಂತಿ ಮಾಡಿಕೊಂಡರು, ಅದನ್ನು ಈ ಸಭೆ ಒಮ್ಮತದಿಂದ ಒಪ್ಪಿ ಈ ಚರ್ಚೆಯನ್ನು ಮುಂದಕ್ಕೆ ಹಾಕಿದ್ದು ಆಯಿತು. ಈಗ ಶ್ರೀಮಾನ್ ದೊಡ್ಡಮೇಟಿಯವರು ಈ ನಿರ್ಣಯವನ್ನು ಮತ್ತೆ ಈ ಸಭೆಯ ಮುಂದೆ ಮಂಡಿಸುವುದಕ್ಕೆ ಉಪಕ್ರಮಿಸಿದ್ದಾರೆ. ನಾನು ಬಹಳ ಗಂಭೀರವಾಗಿ, ಬಹಳ ಜವಾಬ್ದಾರಿಯುತವಾಗಿ ಮತ್ತು ಬಹಳ ಕಳಕಳಿಯಿಂದ ಶ್ರೀಮಾನ್ ದೊಡ್ಡಮೇಟಿಯವರಿಗೆ ಪ್ರಾರ್ಥನೆ ಮಾಡುತ್ತೇನೆ. ಅಂದು ಮುಖ್ಯಮಂತ್ರಿಯವರು ಮಂಡಿಸಿದ ಸೂಚನೆಗೆ ಅಂದು ಏನು ಸಂದರ್ಭ, ಅಂದಿನ ಸನ್ನಿವೇಶ ಏನಿತ್ತೋ ಆ ಸನ್ನಿವೇಶ ಇಂದೂ ಬದಲಾವಣೆಯಾಗಿಲ್ಲ. ಆ ಸನ್ನಿವೇಶಗಳೆಲ್ಲವೂ ಕೂಡ ಮುಂದುವರಿಯುತ್ತಲೇ ಇವೆ. ಆದ್ದರಿಂದ ಇಂದು ಮತ್ತೆ ಮೇಲೆಂದ ಮೇಲೆ, ಸಂಪೂರ್ಣ ಕರ್ನಾಟಕವನ್ನು ಮಾಡಬೇಕೆಂದು ಕೆಲವರು ಯಾರು ಹೊರಟಿದ್ದಾರೆ ಅವರಿಗೆ ನಮ್ಮ ಸಹಾಯ ಬೇಕೆಂದು ಅಪೇಕ್ಷೆಪಡುವುದಾದರೆ ಇಂತಹ ನಿರ್ಣಯವನ್ನು ಮತ್ತೆ ಮತ್ತೆ ಈ ಸಭೆಯಲ್ಲಿ ತರತಕ್ಕ ಹವ್ಯಾನವನ್ನು ಬಿಡಬೇಕೆಂದು ಶ್ರೀಮಾನ್ ದೊಡ್ಡಮೇಟಿಯವರಲ್ಲಿ ಪ್ರಾರ್ಥನೆ ಮಾಡಿ, ಈ ಸಭೆಯೂ ಕೂಡ ಇದನ್ನು ಬಹಳ ಕಳಕಳಿಯಿಂದ ಆಲೋಚನೆ ಮಾಡಬೇಕೆಂದು ಇಲ್ಲಿ ನೆರೆದಿರತಕ್ಕ ಎಲ್ಲರನ್ನೂ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—How is it a point of order ? The only thing that I was trying to understand was that the matter has been discussed threadbare with emotion and upserge of feelings two and a half years ago and that an appeal was made by the Hon'ble the Chief Minister that it should not be pressed at that time. It was decided that it should be put off and there the matter ended. Is it a point of order and is any rule violated ? If I were to uphold the point of order, I would be finding